ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇವೊತ್ತಿನ ಅಜೆಂಡಾ ಪ್ರಕಾರ ಚರ್ಚೆಯಾಗಬೇಕಾದ ಒಂದೇ ವಿಷಯ ಉಳಿದಿದೆ. ಅದೇನೆಂದರೆ, ನಿಯಮ 69ರ ಕೆಳಗೆ ಮಾನ್ಯ ಸದಸ್ಯರುಗಳಾದ ಸಿ.ಎಂ. ಲಿಂಗಪ್ಪನವರು ಮತ್ತು ಎ.ಟಿ. ರಾಮಸ್ವಾಮಿಯವರು ಪ್ರಸ್ತಾಪಿಸುವವರಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಅಧ್ಯಕ್ಷರ ಅಪ್ಪಣೆ ಏನಾಗಿದೆಯೆಂದರೆ, ಮೊದಲು ಶೂನ್ಯ ವೇಳೆ ತೆಗೆದುಕೊಳ್ಳಿ, ಅನಂತರ ತಾವು ಬರುವುದಾಗಿ ಹೇಳಿರುವುದರಿಂದ, ಈಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನಾನು ಮಾನ್ಯ ಸದಸ್ಯರಾದ ಬಿ.ಬಿ. ಶಿವಪ್ಪನವರು ಕರೆದಿದ್ದು, ಶೂನ್ಯ ವೇಳೆ ಮುಗಿಯುವುದರೊಳಗೆ ಅಧ್ಯಕ್ಷರು ಬರುತ್ತಾರೆ. ನಂತರ, ಅವರು ನಿಯಮ 69ನ್ನು ಚರ್ಚೆಗೆ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಗಬಹುದು.

ಸಕಲೇಶಪುರ ತಾಲ್ಲೂಕಿನ ಮಣಿಗನಹಳ್ಳಿಯ ಹೇಮಂತ ಎಂಬುವವರನ್ನು ಕೊಲೆ ಮಾಡಿ ಹೊಳೆಗೆ ಎಸೆದಿರುವುದು.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ನನ್ನ ಕ್ಷೇತ್ರದಿಂದ ನನಗೆ ಒಂದು ಪತ್ರ ಬಂದಿದೆ. ಮಣಿಗನಹಳ್ಳಿ ಬಸವರಾಜು ಎಂಬುವವರ ಮಗ 19 ವರ್ಷ ವಯಸ್ಸುಳ್ಳ ಹೇಮಂತ ಎಂಬುವವರನ್ನು ದಿನಾಂಕ 18.1.98ರಂದು ಅದೇ ಊರಿನವರು ಸೇರಿಕೊಂಡು ಆತನನ್ನು ಕೊಲೆ ಮಾಡಿ ಹೊಳೆಗೆ ಎಸೆದಿದ್ದರು. ಇದರ ಬಗ್ಗೆ ಆಲೂರು ಪೊಲೀಸರು ಮಹಜರು, ವಗೈರೆ, ಎಲ್ಲಾ ನಡೆಸಿ ದೇವರಾಜ್ ಎಂಬುವವರನ್ನು ಮಾತ್ರ ಒಳಗಡೆ ಇಟ್ಟಿದ್ದಾರೆ, ಇಷ್ಟು ಬಿಟ್ಟರೆ ಬೇರೆ ಯಾವ ವಿಧವಾದ ತೀರ್ಪು ಕೊಡದೆ ಪ್ರತಿ ದಿನ ಪೊಲೀಸರ ಬಳಿಗೆ ತಿರುಗಿ ಸಾಕಾಗಿ ಅವರಿಂದ ಇದುವರೆವಿಗೂ ಯಾವುದೇ ರೀತಿಯ ಪ್ರತಿಕ್ರಿಯೆ ಇಲ್ಲದೆ ಚೆನ್ನಾಗಿ ದುಡ್ಡು ತಿಂದು ನಮಗೆ ಯಾವುದೇ ರೀತಿಯ ನ್ಯಾಯ ಸಿಕ್ಕಿದಂತೆ ಕಾಣುವುದಿಲ್ಲ. ಆದುದರಿಂದ ನಮ್ಮ ಜಿಲ್ಲೆಯ ಧಣಿಯವರನ್ನೇ ಹಿಡಿಯಬೇಕೆಂದು ತಮ್ಮಲ್ಲಿ ಇವರು ಬರುತ್ತಿರುವುದರಿಂದ ದಯಮಾಡಿ ಬದುಕಿಬಾಳಬೇಕಾದ ಪ್ರಾಯದ ಮಗನನ್ನು ಕಳೆದುಕೊಂಡ ಇವರಿಗೆ ತಾವೇ ದಾರಿ ತೋರಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆಂದು ಪತ್ರ ಬರೆದಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಈ ಪತ್ರ ಬರೆದವರು ಬೇರಾರೂ ಅಲ್ಲ. ಹಿಂದೆ ಡಿ.ಜಿ.ಪಿ. ಆಗಿದ್ದಂಥ ಸನ್ಮಾನ್ಯ ಗರುಡಾಚಾರ್ ಅವರ ಸಹೋದರಿ. ಬಹುಶಃ ಈ ವ್ಯಕ್ತಿ ಅವರ ಪಕ್ಕದ ಊರಿನವರಿರಬೇಕು. ವಿಷಯವೇನೆಂದರೆ, ದಿನಾಂಕ 18.1.98ರಂದು ಹೇಮಂತ ಎಂಬ ಹುಡುಗನ ಮನೆಗೆ ರವಿ, ಪ್ರಕಾಶ್, ಶಿವಣ್ಣ ಮತ್ತು ದೇವರಾಜು ಎಂಬ ನಾಲ್ಕು ಜನರು ಬಂದು ಆತನನ್ನು ಕರೆದುಕೊಂಡು ಹೋಗುತ್ತಾರೆ. ಮನೆಯಿಂದ ಹೋದಂಥ ವ್ಯಕ್ತಿ ಮತ್ತೆ ವಾಪಸ್ಸು ಮನೆಗೆ ಬರುವುದಿಲ್ಲ. ಎರಡು ದಿವಸಗಳ ನಂತರ ಆತನ ಶವ ಹೇಮಾವತಿ ನದಿಯಲ್ಲಿ ಸಿಗುತ್ತದೆ. ಅದನ್ನು ಪೊಲೀಸರು ತೆಗೆದು ಮಹಜರು, ವಗೈರೆ

ಮಾಡಿ ಎಫ್.ಐ.ಆರ್. ಕೂಡಾ ಹಾಕಿದ್ದಾರೆ. ಅದರಲ್ಲಿ ಅವರು ವೈದ್ಯರ ಸರ್ಟಿಫಿಕೇಟ್ ಆಧಾರದ ಮೇಲೆ ಕತ್ತು ಹಿಚುಕಿದ್ದರಿಂದ ಸಾವು ಸಂಭವಿಸಿದೆ. ಎನ್ನುವ ಒಂದು ಮೊಕದ್ದಮೆಯನ್ನು ದಾಖಲಿಸಿದ ಬಳಿಕ ಏನೂ ಕ್ರಮ, ತೆಗೆದುಕೊಳ್ಳಲಿಲ್ಲ. ಇದರ ಬಗ್ಗೆ ವಿಚಾರಿಸುವುದಕ್ಕೆ ಹೋದಂಥ ಕುಟುಂಬದ ಸದಸ್ಯರನ್ನು ಹಾಗೂ ಅವರ ಮಾವನವರನ್ನು ಠಾಣೆಯೊಳಗೆ ಕೂಡಿ ಹಾಕಿ ಹೊಡೆದು ಅವರುಗಳ ಮೇಲೆ ಕೇಸ್ ಹಾಕಿ ಇನ್ನು ಮುಂದೆ ಠಾಣೆಗೆ ಬರಬಾರದೆಂದು ಬೆದರಿಸಿ ವಾಪಸ್ಸು ಕಳುಹಿಸಿದ್ದಾರೆ. ನಿನ್ನೆ ದಿವಸ ಈ ಪತ್ರದೊಂದಿಗೆ ಅವರು ಇಲ್ಲಿಗೆ ಬಂದಿದ್ದಾರೆ. ಆದುದರಿಂದ, ದಯಮಾಡಿ ಗೃಹ ಸಚಿವರು ಇದನ್ನು ಗಮನಕ್ಕೆ ತೆಗೆದುಕೊಂಡು ಇಂತಹ ಅನೇಕ ಪ್ರಕರಣಗಳು ನನ್ನ ಕ್ಷೇತ್ರದಲ್ಲಾಗಿದೆ. ಅದರಲ್ಲೂ ಆಲೂರು ಮತ್ತು ಸಕಲೇಶಪುರಗಳಲ್ಲಿ ಹಲವಾರು ಕೊಲೆಗಳಾದವು. ಬಹುತೇಕ ನನಗೆ ತಿಳಿದ ಮಟ್ಟಿಗೆ ಇಲ್ಲಿಯವರೆವಿಗೂ ಕೊಲೆಯಾದ ಒಂದೂ ಪ್ರಕರಣ ಪತ್ತೆಯಾಗಲಿಲ್ಲ. ಇವೇ ರೀತಿ ಹಿಂದೆ ಅದೇ ಆಲೂರಿನಲ್ಲಿ ಮಧ್ಯಾಹ್ನ ಊಟಕ್ಕೆ ಹೋಗಿ ಬರುತ್ತಿದ್ದ ಉಪಾಧ್ಯಾಯರನ್ನು ಹಾಡುಹಗಲೇ ಕೊಲೆ ಮಾಡಿರುವ ವಿಷಯ ಗೊತ್ತಿದೆ. ಆ ಕೊಲೆ ಯಾರು ಮಾಡಿದರೆಂದು ಇಡೀ ಆಲೂರು ತಾಲ್ಲೂಕಿನವರೆಲ್ಲರೂ ಮಾತನಾಡುತ್ತಾರೆ. ಇದರ ಬಗ್ಗೆಯೂ ಇಲ್ಲಿಯವರೆಗೆ ಏನೂ ಕ್ರಮ ಕೈಗೊಳ್ಳಲಿಲ್ಲ. ಈ ರೀತಿಯಾಗಿ ಆಲೂರು ಮತ್ತು ಸಕಲೇಶಪುರಗಳಲ್ಲಾದ ಅನೇಕ ಕೊಲೆ ಪ್ರಕರಣಗಳು ಇದುವರೆಗೆ ಪತ್ತೆಯಾಗಲಿಲ್ಲ. ಆದರೆ, ಹೇಮಂತ ಎಂಬುವವರ ಕೊಲೆ ಇತ್ತೀಚೆಗೆ ನಡೆದಿರುವಂತಾದ್ದು. ದಯಮಾಡಿ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ? ಏಕೆಂದರೆ, ಹತ್ತೊಂಭತ್ತು ವರ್ಷ ಪ್ರಾಯದ ತಂದೆಗೆ ಒಬ್ಬನೇ ಮನನಾಗಿದ್ದು, ಆತನನ್ನು ಮನೆಯಿಂದ ಹೊರಗಡೆ ಕರೆದುಕೊಂಡು ಹೋಗಿರುವುದನ್ನು ಪ್ರತಿಯೊಬ್ಬರೂ ನೋಡಿದ್ದಾರೆ, ಮತ್ತು ಏನೇನು ಮಾತುಕತೆಯಾಗಿದೆ ಎಂಬ ಬಗ್ಗೆ ಆತನ ಮನೆಯವರು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾರೆ. ಇದು ಕಣ್ಣಿನಲ್ಲಿ ಕಂಡಂಥ ವಿಚಾರ. ಮನೆಯಿಂದ ಹೊರಗೆ ಹೋದವ ಪುನಃ ವಾಪಸ್ಸು ಬರದೇ ಕೊಲೆಯಾಗಿರುವ ಬಗ್ಗೆ ದಯಮಾಡಿ ಸರ್ಕಾರ ಯಾವ ರೀತಿಯ ನಿಲುವು ತೆಗೆದುಕೊಳ್ಳುತ್ತದೆಂದು ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

4.00 ಪಿ.ಎಂ.

ಶ್ರೀ ಆರ್. ರೋಷನ್ ಬೇಗ್ (ಗೃಹಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ಘಟನೆ ನಡೆದಿದ್ದು ಆಲೂರ ಪೋಲಿಸ್ ಸ್ಟೇಷನ್ ವ್ಯಾಪ್ತಿಯಲ್ಲಿ. 25 year old Hemantha, native of Managanahalli Village. Motive of the offence is illicit relationship with the wife of one Ravi Shankar of the same village. Hemantha was found missing from 18.1.98. Then, his body was found in the backwaters of Hemavathi river. On the complaint of one Rajanna, that is Basavaraj, father of Hemantha, a case in UDR No. 3/98 under Sec. 174 of Cr. P.C was registered and investigation has been taken up. In the Post Mortem Report, it is said, the death was due to strangulation. The Allur Police have registered a case of murder in crime No. 214/98 under Sec. 302 and

211 of IPC. Five persons have been suspected. ಆ ಐದು ಜನರಲ್ಲಿ ದೇವರಾಜ ಪ್ರಕಾಶ್, ಶಿವಣ್ಣ, ಮಾಯಾ ಮತ್ತು ರವಿಶಂಕರ ಓಡಿಹೋಗಿದ್ದಾರೆ Prakash and Shivanna are out on Court Bail. ದೇವರಾಜ ಇನ್ನು ಕಸ್ಟಡಿಯಲ್ಲಿ ಇದ್ದಾನೆ. Ravishankar and Maya are absconding. ಇವರನ್ನು ಅದಷ್ಟು ಬೇಗ ಅರೆಸ್ಟ್ ಮಾಡಲು ಪೋಲೀಸ್‌ನವರು ಪ್ರಯತ್ನಪಡುತ್ತಿದ್ದಾರೆ. ದೇವರಾಜ ಈಗ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇದ್ದಾನೆ. ಪ್ರಕಾಶ್ ಮತ್ತು ಶಿವಣ್ಣ ಕೋರ್ಟ್ ಬೇಲ್ ಮೇಲೆ ಹೊರಗಡೆ ಬಂದಿದ್ದಾರೆ. ಆದಷ್ಟು ಬೇಗ ಮಾಯಾ ಮತ್ತು ರವಿಯನ್ನು ಅರೆಸ್ಟ್ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ. ಮತ್ತು ಬಸವರಾಜ ಅವರ ತಂದೆಯವರು ಪೋಲೀಸ್ ಸ್ಟೇಷನ್‌ಗೆ ವಿಚಾರಿಸಲು ಹೋದಾಗ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು ಬೆದರಿಸಿ ಹೊಡಿದ್ದಿದ್ದಾರೆ ಎನ್ನುವ ವಿಚಾರವನ್ನು ನಾನು ಎಸ್‌ಪಿ ಮತ್ತು ಡಿಐಜಿರವರ ಹತ್ತಿರ ಮಾತನಾಡಿ ಏಕೆ ಆಯಿತು ಎಂದು ವಿಚಾರಿಸಿ, ಈ ರೀತಿ ನಡೆದುಕೊಂಡವರ ಮೇಲೆ ತಕ್ಷಣ ಕ್ರಮತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಎಸ್. ಅಂಗಾರರವರು.

ಸುಳ್ಯ ತಾಲ್ಲೂಕಿನ ಪಂಜ ವ್ಯವಸಾಯ ಬ್ಯಾಂಕಿನ ರೈತರಿಗೆ ಆಗಿರುವ ಅನ್ಯಾಯ

ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಉಪಾಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಪಂಜ ವ್ಯವಸಾಯ ಬ್ಯಾಂಕಿನ ಕಾರ್ಯದರ್ಶಿಯವರು ರೈತರನ್ನು ಮೋಸಗೊಳಿಸಿ, ಸುಳ್ಳು ದಾಖಲೆ ಮತ್ತು ನಕಲಿ ಸಹಿ ಹಾಕಿ ಅನೇಕ ರೈತರ ಹೆಸರಿನಲ್ಲಿ ಮಿತಿಗಿಂತ ಹೆಚ್ಚಿನ ಸಾಲವನ್ನು ನಮೂದಿಸಿ ಹಣವನ್ನು ಕಟ್ಟದೆ ಮೋಸಗೊಳಿಸಿದ ಪರಿಣಾಮವಾಗಿ ಈಗಾಗಲೇ ಸುಮಾರು ನಾಲ್ಕುನೂರು ಕುಟುಂಬಗಳ ಜಪ್ತಿ ಮಾಡಲು ಎಲ್ಲಾ ರೀತಿಯ ಕಡತಗಳು ತಯಾರು ಆಗಿವೆ, ಜಪ್ತಿ ಆದರೆ ಅನೇಕ ಸಣ್ಣ ರೈತರ ಕುಟುಂಬಗಳು ಬೀದಿ ಪಾಲು ಆಗುವ ಸಾಧ್ಯತೆ ಇದೆ. ಈಗಾಗಲೇ ಕಾರ್ಯದರ್ಶಿಯವರನ್ನು ಅಮಾನತ್ತುಗೊಳಿಸಿದ್ದು ಸೆಕ್ಷನ್ 63ರ ಕೆಳಗೆ ತನಿಖೆ ನಡೆಯುತ್ತಿರುವ ಹಂತದಲ್ಲಿ ಯಾವ ರೈತರಿಂದಲೂ ಬಲಾತ್ಕಾರವಾಗಿ ವಸೂಲಿ ಮಾಡಬಾರದು ಹಾಗೂ ನಿರಪರಾಧಿ ರೈತರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು. ಈ ರೈತರನ್ನು ಮೋಸಗೊಳಿಸಿ ನಕಲಿ ಸಹಿ ಹಾಕಿ ಹಣವನ್ನು ಮಾಡಿಕೊಂಡು ಅಪಾರ ಆಸ್ತಿಯನ್ನು ಹೊಂದಿರುವ ಕಾರ್ಯದರ್ಶಿಯವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ನಿರಪರಾಧಿ ರೈತರ ಹೆಸರಿನಲ್ಲಿ ಇರುವ ಸಾಲವನ್ನು ಕಾರ್ಯದರ್ಶಿಯವರ ಆಸ್ತಿಯಿಂದ ಭರಿಸಬೇಕು ಎಂದು ಈ ಬಗ್ಗೆ ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದಂತೆ ಈಗಾಗಲೆ ಸೆಕ್ಷನ್ 63ರ ಕೆಳಗೆ ತನಿಖೆ ಮಾಡಿದ್ದೇವೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಅಲ್ಲಿ ಏನಾದರೂ ಖೊಠಿಯಾಗಿ ನಡೆದಿದ್ದರೆ ಇದರಿಂದ ರೈತರಿಗೆ ಯಾವುದೇ ತರಹದ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

ಉಪಾಧ್ಯಕ್ಷರು : ಟಿ.ಬಿ. ಜಯಚಂದ್ರರವರು